ವಿವಾಹ ಸಂಬಂಧಗಳನ್ನು ನಿರ್ಬಂಧಿಸಿದ್ದು ಅಂತಹ ಒಂದು ಕ್ರಮ ಎಂದೂ, ಹಾಗಾಗಿ ಭಾರತದ ಮೇಲ್ಜಾತಿಯವರು ಆರ್ಯರಿರಬಹುದು ಎಂದೂ ಕೆಲವರು ಸೂಚಿಸಿದ್ದರು. ಜೊತೆಗೆ, ತಮ್ಮ ಮೂಲವಂಶದ ಶುದ್ಧತೆಯನ್ನು ಇನ್ನೂ ಉಳಿಸಿಕೊಂಡಿರಬಹುದಾದ ಆರ್ಯರ ಗುಂಪು ಭಾರತದ ಅಥವಾ ಅದರ ಸುತ್ತಮುತ್ತ ಎಲ್ಲೋ ನೆಲೆಸಿರುವ ಸಾಧ್ಯತೆ ಇದೆ ಎಂದೂ ನಂಬಿದ್ದರು."

"ಅಂತಹ ಯೋಚನೆಯ ಫಲವೇ ಈ ಆರ್ಯ ಕಣಿವೆಯೆ?" ಎಂದು ಕೇಳಿದ ಉಮಾ ಶಂಕರ್. ಅದನ್ನು ಕೇಳಿ ನಗುತ್ತ ದಿಂಗ್ಸೆ ಹೇಳಿದರು.

"ಇರಬಹುದಾದರೂ ಈ ಆರ್ಯ ಕಣಿವೆಯ ಕೆಲವು ಜನರು ಅಲೆಕ್ಸಾಂಡರ್‌ನ ಸೈನ್ಯದ ಜೊತೆ ಬಂದು ಹಿಂದೆ ಉಳಿದ ಒಂದು ಪಂಗಡ ಎಂದೂ ಹೇಳಲಾಗುತ್ತದೆ."

"ಅವರು ಕಲಾಶ್ ಜನರಲ್ಲವೆ? ಅವರಿರುವುದು ಆಫ್ಘಾನಿಸ್ತಾನದ ಉತ್ತರದ ಕಣಿವೆಗಳಲ್ಲಿ ಎನ್ನಲಾಗಿದೆ?"

"ಅಲೆಕ್ಸಾಂಡರ್ ಜೊತೆ ಅದೆಷ್ಟು ಗುಂಪುಗಳು ಬಂದಿದ್ದವೋ? ಅವರಲ್ಲಿ ಯಾರು ಎಲ್ಲೆಲ್ಲಿ ಉಳಿದರೋ ಯಾರಿಗೆ ಗೊತ್ತು? ಹಾಗೆ ಹಿಂದೆ ಉಳಿದವರನ್ನೂ ಆರ್ಯರೆಂದು ನಂಬುವ ಪರಿಪಾಠವಿದೆ. ಸತ್ಯವನ್ನು ಇನ್ನೂ ಯಾರೂ ಹುಡುಕಿ ತೆಗೆದಿಲ್ಲ ಎಂದೆ ಹೇಳಬಹುದು" ಎಂದರು.

ಅಲ್ಲಿಗೆ ನಮ್ಮ ಚರ್ಚೆ ಒಂದು ಮಟ್ಟ ತಲುಪಿತ್ತು. ನಮಗೂ ಹಿಂದಿರುಗಲು ಸಮಯವಾಗಿತ್ತು. ಆದ್ದರಿಂದ ಅವರನ್ನು ಸಂಪರ್ಕಿಸಬೇಕಾದರೆ ಹೇಗೆ ಎಂದಾಗ ಮತ್ತೆ ಅವರು ಶಾಲೆಯ ಮೇಲಿದ್ದ ಟವರ್ ತೋರಿಸುತ್ತ ಹೇಳಿದರು.

"ಅದರ ಮೂಲಕ ನನಗೆ ಇ–ಮೇಲ್ ಕೂಡ ತಲುಪುತ್ತದೆ. ನನಗೆ ಫೋನ್‌ಗಿಂತ ಇ–ಮೇಲ್ ಸುಲಭವಾಗಿ ತಲುಪುತ್ತದೆ" ಎಂದು ಅವರ ಇ–ಮೇಲ್ ವಿಳಾಸ ಕೊಟ್ಟರು. ಅವರನ್ನು ಮತ್ತೆ ಸಂಪರ್ಕಿಸುವುದಾಗಿ ತಿಳಿಸಿ ಧನ್ಯವಾದ ಹೇಳಿ ಕೆಳಗಿಳಿದು ಬಂದೆವು.

★★★

ದಾರಿಯುದ್ದಕ್ಕೂ ನಮ್ಮನ್ನು ಹಲವು ಪ್ರಶ್ನೆಗಳು ಕಾಡಲಾರಂಭಿಸಿದವು – ಭಿಕ್ಕು ದಯಾಮ ದಿಂಗ್ಸೆ ಅವರ ಬಗ್ಗೆ. ಮೊದಲನೆಯದಾಗಿ ದಲೈ ಲಾಮಾ ಅವರು ಇಬ್ಬರು ಜರ್ಮನಿಯರ ಜೊತೆ ಇರುವ ವಿರಳ ಚಿತ್ರಗಳನ್ನು ತಮ್ಮ ಕೊಠಡಿಯಲ್ಲೇಕೆ ತೂಗು ಹಾಕಿಕೊಂಡಿದ್ದಾರೆ? ಈ ಚಿತ್ರಗಳ ಮೇಲೆ ಅವರಿಗೇಕೆ ಅಷ್ಟು ಅಭಿಮಾನ? ಹಾಗೆ ಅಭಿಮಾನ ಇದ್ದರೂ ಆ ಬೆಗರ್ ಬಗ್ಗೆ ಏಕೆ ಅಷ್ಟೊಂದು ಕೋಪಗೊಂಡಂತಿದ್ದರು. ಜರ್ಮನಿಯ ಆ ವಿಜ್ಞಾನಿಗೂ ಇವರಿಗೂ ಯಾವ ಸಂಬಂಧ? ಬೆಗರ್ ಬಗ್ಗೆ ವಿವರ ನೀಡುವಲ್ಲಿ ಏಕೆ ಅನಾಸಕ್ತರಾಗಿದ್ದರು? ಬೆಗರ್ ಯೆಹೂದಿಗಳನ್ನು ಅನಿಲ ಕೋಣೆಯಲ್ಲಿ ಸಾಯಿಸಿ ವಿಜ್ಞಾನದ ಅಧ್ಯಯನಕ್ಕೆ ಉಪಯೋಗಿಸಲು ನೆರವಾದದ್ದು ಎಷ್ಟು ನಿಜ? ಆ ಯೋಜನೆಗೂ ಆತನ ಆರ್ಯರ ಬಗೆಗಿನ ಕುತೂಹಲಕ್ಕೂ ಸಂಬಂಧವಿದೆಯೆ? ಈ ಎಲ್ಲ ಪ್ರಶ್ನೆಗಳನ್ನು ನಾವು ಚರ್ಚಿಸುತ್ತಿದ್ದಂತೆ, ಒಂದು ಸಮಯದಲ್ಲಿ ವೀಣಾ ಏನೋ ನೆನಸಿಕೊಂಡವಳಂತೆ ಹೇಳಿದಳು.

"ಈ ಬೆಗರ್ ಭಾಗಿಯಾಗಿದ್ದ ಎನ್ನಲಾದ 86 ಯೆಹೂದಿಗಳ ಸಾವಿನ ಯೋಜನೆಯ ರೂವಾರಿ, ಆಗಸ್ಟ್ ಹಿರ್ಟ್ ಇದ್ದದ್ದು ಸ್ಟ್ರಾಸ್‌ಬರ್ಗ್‌ನಲ್ಲಿ ಎಂದರಲ್ಲವೆ?"

"ಹೌದು" ಎಂದು ನಾನು ಹೇಳುತ್ತಿದ್ದಂತೆ ತಟ್ಟನೆ ವೀಣಾಳ ಪ್ರಶ್ನೆಯ ಉದ್ದೇಶ